ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಇತರೆ ರಾಜ್ಯಗಳ ವಾರ್ತೆ

ಪತ್ರಿಕೆಯ ಹೆಸರು : NAME OF THE NEWS PAPER : ಪ್ರಜಾವಾಣಿ    ದಿನಾಂಕ : DATE : 25/11/2019

# ‘ಮಹಾ’ ಭವಿಷ್ಯ ಇಂದು

## ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ: ಬೆಂಬಲ–ಆಹ್ವಾನ ಪತ್ರಗಳ ಪರಿಶೀಲನೆ

ಪ್ರಜಾವಾಣಿ ವಾರ್ತೆ 25-11-19

ನವದೆಹಲಿ: ಮಹಾರಾಷ್ಟ್ರದಲ್ಲಿ ರಚನೆಯಾಗಿರುವ ಬಿಜೆಪಿಯ ದೇವೇಂದ್ರ ಫಡಣವೀಸ್ ನೇತೃತ್ವದ ಸರ್ಕಾರದ ಭವಿಷ್ಯವು ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ಬೆಳಿಗ್ಗೆ ನಿರ್ಧಾರವಾಗುವ ಸಾಧ್ಯತೆ ಇದೆ.

ಸರ್ಕಾರ ರಚಿಸಲು ಬೇಕಾದಷ್ಟು ಶಾಸಕರ ಬೆಂಬಲ ಇದೆ ಎಂದು ಫಡಣವೀಸ್ ಅವರು ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರಿಗೆ ಸಲ್ಲಿಸಿದ್ದ ಪತ್ರ ಮತ್ತು ಸರ್ಕಾರ ರಚನೆಗೆ ಫಡಣವೀಸ್ ಅವರಿಗೆ ರಾಜ್ಯಪಾಲರು ನೀಡಿದ್ದ ಆಹ್ವಾನಪತ್ರಗಳನ್ನು ಸೋಮವಾರ ಬೆಳಿಗ್ಗೆ 10.30ರೊಳಗೆ ಸಲ್ಲಿಸುವಂತೆ ನ್ಯಾಯಮೂರ್ತಿ ಎನ್.ವಿ. ರಮಣ ನೇತೃತ್ವದ ತ್ರಿಸದಸ್ಯ ಪೀಠವು ಭಾನುವಾರ ಸೂಚಿಸಿದೆ.

ಈ ಪತ್ರಗಳನ್ನು ಸಲ್ಲಿಸಲು ಸಮಯಾವಕಾಶ ನೀಡಬೇಕು ಎಂದು ಬಿಜೆಪಿ ಶಾಸಕರ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲ ಮುಕುಲ್ ರೋಹಟಗಿ ವಾದಿಸಿದರು. ಆದರೆ, ಸಮಯ ನೀಡಲು ಪೀಠವು ನಿರಾಕರಿಸಿತು.

ಶಿವಸೇನಾ–ಎನ್‌ಸಿಪಿ–ಕಾಂಗ್ರೆಸ್‌ನ ಮಹಾ ವಿಕಾಸ ಅಘಾಡಿ ಮೈತ್ರಿಕೂಟದ ಸರ್ಕಾರವು ಇನ್ನೇನು ಅಧಿಕಾರಕ್ಕೆ ಬರಲಿದೆ ಎಂಬ ಸನ್ನಿವೇಶದಲ್ಲಿ ಶನಿವಾರ ಬೆಳಿಗ್ಗೆ 7.50ಕ್ಕೆ ಫಡಣವೀಸ್ ಅವರು ಮುಖ್ಯಮಂತ್ರಿಯಾಗಿ ಮತ್ತು ಎನ್‌ಸಿಪಿಯ ಅಜಿತ್ ಪವಾರ್ ಅವರು ಉಪಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದರು. ಇದನ್ನು ಪ್ರಶ್ನಿಸಿ ಮಹಾ ವಿಕಾಸ ಅಘಾಡಿಯು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಈ ಸರ್ಕಾರ ಅಸಾಂವಿಧಾನಿಕ ಎಂದು ಆರೋಪಿಸಿತ್ತು.

7ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 7

### ಮಹಾ ವಿಕಾಸ ಅಘಾಡಿ ವಾದ

- ರಾಷ್ಟ್ರಪತಿ ಆಳ್ವಿಕೆ ಹಿಂದಕ್ಕೆ ಪಡೆಯಲು ರಾಜ್ಯಪಾಲರು ಮಾಡಿದ ಶಿಫಾರಸು ಮತ್ತು ಫಡಣವೀಸ್ ಅವರನ್ನು ಸರ್ಕಾರ ರಚಿಸಲು ಆಹ್ವಾನಿಸಿರುವುದು ನಿಗೂಢ
- ಬಹುಮತ ಸಾಬೀತಿಗೆ ಫಡಣವೀಸ್ ಅವರಿಗೆ ಎಷ್ಟು ಸಮಯ ಕೊಡಲಾಗಿದೆ ಎಂಬುದು ಬಹಿರಂಗವಾಗಿಲ್ಲ
- ರಾಜ್ಯಪಾಲರ ನಿರ್ಧಾರವು ಪೂರ್ವಗ್ರಹ ಮತ್ತು ದುರುದ್ದೇಶದಿಂದ ಕೂಡಿದೆ. ಸುಪ್ರೀಂ ಕೋರ್ಟ್ ರೂಪಿಸಿರುವ ನಿಯಮಗಳಿಗೆ ರಾಜ್ಯಪಾಲರ ನಿರ್ಧಾರವು ವ್ಯತಿರಿಕ್ತ
- ಸಂಖ್ಯೆಗಳು ಮತ್ತು ಬಹುಮತದ ಆಧಾರದಲ್ಲಿ ಪ್ರಜಾಪ್ರಭುತ್ವ ಕಾರ್ಯನಿರ್ವಹಿಸುತ್ತದೆ. ಅಗತ್ಯ ದಾಖಲೆಗಳ ಆಧಾರದಲ್ಲಿ ರಾಜ್ಯಪಾಲರು ನಿರ್ಧಾರ ಕೈಗೊಂಡಿಲ್ಲ

### ಬಿಜೆಪಿ ಶಾಸಕರ ವಾದ

- ನೇರವಾಗಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಹಾಕಿರುವುದು ಸರಿಯಲ್ಲ, ಬಾಂಬೆ ಹೈಕೋರ್ಟ್‌ಗೆ ದೂರು ಕೊಡಬೇಕಿತ್ತು
- ರಾಜ್ಯಪಾಲರ ನಿರ್ಧಾರವು ನ್ಯಾಯಾಂಗದ ಪರಿಶೀಲನೆಯ ವ್ಯಾಪ್ತಿಗೆ ಬರುವುದಿಲ್ಲ. ಸರ್ಕಾರ ರಚನೆಗೆ ಯಾವ ಪಕ್ಷವನ್ನು ಆಹ್ವಾನಿಸಬೇಕು ಎಂಬುದು ಅವರ ವಿವೇಚನಾಧಿಕಾರ
- ತಾವು ಕೈಗೊಂಡ ಕ್ರಮಗಳಿಗೆ ರಾಜ್ಯಪಾಲರು ಉತ್ತರ ಹೇಳಬೇಕಿಲ್ಲ. 361ನೇ ವಿಧಿ ಅಡಿಯಲ್ಲಿ ರಾಜ್ಯಪಾಲರಿಗೆ ರಕ್ಷಣೆ ಇದೆ
- ಮೂರೂ ಪಕ್ಷಗಳಿಗೆ (ಮಹಾ ವಿಕಾಸ ಅಘಾಡಿ) ಸರ್ಕಾರ ರಚನೆಗೆ ಸಮಯ ನೀಡಲಾಗಿತ್ತು. ಈ ಪಕ್ಷಗಳು ಸರ್ಕಾರ ರಚಿಸಿಲ್ಲ. ಈಗ, ಫಡಣವೀಸ್ ಅವರು ವಿಶ್ವಾಸಮತ ಸಾಬೀತು ಮಾಡಲಿ. ಆದರೆ, ಅದಕ್ಕೆ ಆತುರವೇನೂ ಇಲ್ಲ

### ‘ಸುಪ್ರೀಂ’ ಫಲಿತಾಂಶ

- ಫಡಣವೀಸ್ ಅವರು ವಿಶ್ವಾಸಮತ ಸಾಬೀತು ಪಡಿಸಬೇಕು ಎಂಬ ಮಹಾ ವಿಕಾಸ ಅಘಾಡಿಯ ಕೋರಿಕೆಯನ್ನು ಪೀಠ ಪರಿಶೀಲಿಸಲಿದೆ
- ರಾಜ್ಯಪಾಲರಿಗೆ ಫಡಣವೀಸ್ ಕೊಟ್ಟ ಪತ್ರ, ಫಡಣವೀಸ್‌ಗೆ ರಾಜ್ಯಪಾಲರು ಕೊಟ್ಟ ಆಹ್ವಾನಪತ್ರ ಪರಿಶೀಲಿಸಿದ ಬಳಿಕ ನಿರ್ಧಾರ
- ಸೋಮವಾರ 10.30ರೊಳಗೆ ಈ ಎರಡೂ ಪತ್ರ ಸಲ್ಲಿಕೆಯಾಗಬೇಕು. ವಿಶ್ವಾಸಮತ ಯಾಚನೆಗೆ ಸಂಬಂಧಿಸಿ ಸೋಮವಾರ ಆದೇಶ ಪ್ರಕಟ ಸಾಧ್ಯತೆ

ನಾನು ಎನ್‌ಸಿಪಿಯಲ್ಲೇ ಇರುತ್ತೇನೆ. ಶರದ್ ಪವಾರ್ ನನ್ನ ನಾಯಕ. ಬಿಜೆಪಿ–ಎನ್‌ಸಿಪಿ ಮೈತ್ರಿಕೂಟವು ಮಹಾರಾಷ್ಟ್ರದಲ್ಲಿ ಐದು ವರ್ಷ ಸ್ಥಿರ ಸರ್ಕಾರ ನೀಡಲಿದೆ

**ಅಜಿತ್ ಪವಾರ್**
ಉಪ ಮುಖ್ಯಮಂತ್ರಿ

ಅಜಿತ್ ಪವಾರ್ ಹೇಳಿಕೆ ಸುಳ್ಳು ಮತ್ತು ತಪ್ಪುದಾರಿಗೆ ಎಳೆಯುವಂತಹುದು. ಜನರಲ್ಲಿ ಗೊಂದಲ ಮೂಡಿಸುವುದು ಮತ್ತು ತಪ್ಪು ಅಭಿಪ್ರಾಯ ಮೂಡಿಸುವುದು ಇದರ ಉದ್ದೇಶ

**ಶರದ್ ಪವಾರ್**, ಎನ್‌ಸಿಪಿ ಮುಖ್ಯಸ್ಥ